ದಿನಾಂಕಃ29/11/2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀಸವಾಲುಃ ಪ್ರತಿವಾದಿಯ ಪರ ಶ್ರೀ ಎಲ್.ಎಸ್.ಹೆಚ್ ವಕೀಲರಿಂದಃ</u>**

ನನ್ನ ಮುಖ್ಯವಿಚಾರಣೆ ಪ್ರಮಾಣಪತ್ರವನ್ನು ನನ್ನ ವಕೀಲರು ಬರೆಸಿದ್ದಾರೆ. ಅದರಲ್ಲಿ ಬರೆದಿರುವ ಅಂಶಗಳು ಗೊತ್ತು. ವಾದಿ ಶಿಕಾರಿಪುರಕ್ಕೆ ಸಮಾಜದ ಕೆಲಸದ ನಿಮಿತ್ತ ಬರುತ್ತಿದ್ದುದ್ದರಿಂದ ಪರಿಚಯ. ವಾದಿಯವರು **1981** ರಿಂದ ಪರಿಚಯ. ವಾದಿ ಮತ್ತು ನಮ್ಮ ನಡುವೆ ವಿಶ್ವಾಸವಿತ್ತು. ಪ್ರತಿವಾದಿಯರು ಜಮೀನು ಮಾರಾಟಕ್ಕೆ ಬಂದಾಗ ಪರಿಚಯ. ಮೊದಲು ಮಾತಾನಾಡುತ್ತಿದ್ದರು ಆದರೆ ಪರಿಚಯವಿರಲಿಲ್ಲ.

**2009** ರಲ್ಲಿ ಅಲ್ಲಾಭಕ್ಷಿಯವರ ಜೊತೆ ಪ್ರತಿವಾದಿಯರು ಬಂದು ಮಾರಾಟದ ವಿಚಾರ ತಿಳಿಸಿದರು. ಪ್ರತಿವಾದಿಯರು ಎಂದರೆ ದಿಲ್‌ಶಾದ್, ಖುರ್ಷಿದ್‌ಬೇಗಂ, ಸಮೀವುಲ್ಲಾ ಮತ್ತು ಅಬೀಬುಲ್ಲಾ. ಪ್ರತಿವಾದಿಯರ ಕುಟುಂಬದ ಬಗ್ಗೆ ನನಗೆ ಗೊತ್ತಿಲ್ಲ. ದಾವಾಸ್ವತ್ತಿನ ಪಹಣಿಯನ್ನು ನೋಡಿದ್ದೇನೆ. ಪಹಣಿಯಲ್ಲಿ ಪ್ರತಿವಾದಿಯರ ಹೆಸರು ಮಾತ್ರವಿದೆ. ಸ ನಂ.**51** ಮತ್ತು **46** ರ ಬಗ್ಗೆ ತಹಶೀಲ್ದಾರ್ ನ್ಯಾಯಾಲಯ, ಉಪವಿಭಾಗಾಧಿಕಾರಿಗಳ ನ್ಯಾಯಾಲಯ ಮತ್ತು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ವ್ಯಾಜ್ಯವಿರುವ ಬಗ್ಗೆ ಗೊತ್ತಿಲ್ಲ.

ನನಗೆ ನಾಗರಾಜ ಗೊತ್ತು. ನಾಗರಾಜ್ ಮತ್ತು ನಾನು ಪ್ರತಿವಾದಿಯರಿಗೆ ದಾಖಲೆಗಳನ್ನು ತೆಗೆಸಿಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನನಗೆ ಮತ್ತು ನಾಗರಾಜರವರಿಗೆ ತಹಶೀಲ್ದಾರ್ ನ್ಯಾಯಾಲಯ, ಉಪವಿಭಾಗಾಧಿಕಾರಿಗಳ ನ್ಯಾಯಾಲಯ ಮತ್ತು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ನಡೆಸಲು ಪ್ರತಿವಾದಿಯರು ಜಿಪಿಎ ಕೊಟ್ಟಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯರ ಕಡೆಯಿಂದ ದಿನಾಂಕಃ**13.06.2005** ರಂದು ಬಿ.ಜಿ ನಾಗರಾಜರವರು ಜಿಪಿಎ ಬರೆಸಿಕೊಂಡು ಬಂದಿರಬಹುದು, ಆದರೆ ನನಗೆ ಗೊತ್ತಿಲ್ಲ. ನಾಗರಾಜರವರು ಜಿಪಿಎ ಬರೆದುಕೊಟ್ಟಿರುವ ಬಗ್ಗೆ ನನಗೆ ಏನನ್ನು ಹೇಳಿಲ್ಲ.

ಈಗ ನನಗೆ ತೋರಿಸುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯಲ್ಲಿ ನಾಗರಾಜರವರ ಸಹಿ ಇದೆ. ದಿಃ **10.07.2008** ರಲ್ಲಿ ಆಗಿರುವ ಕರಾರಿನ ಪ್ರತಿ ಎಂದರೆ ಸರಿ. ದಿಃ **10.07.2008** ರಲ್ಲಿ ಆದ ಕರಾರನ್ನು ಯಾರು ಹೇಳಿ ಬರೆಸಿದರು ಮತ್ತು ಎಲ್ಲಿ ಬರೆಸಿದ್ದು ಗೊತ್ತಿಲ್ಲ. ಸದರಿ ಕರಾರುಪತ್ರದಲ್ಲಿ ಸ ನಂ.**51** ರಲ್ಲಿ ಒಟ್ಟು **5** ಎಕರೆ **8** ಗುಂಟೆ ಪೈಕಿ **20** ಗುಂಟೆ ರಸ್ತೆಗೆ ಹೋಗಿ **4** ಎಕರೆ **28** ಗುಂಟೆ ಉಳಿದಿದೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ಸದರಿ ಕರಾರು ಆದ ದಿನ ವಾದಿ ಪ್ರತಿವಾದಿಯರಿಗೆ ರೂ.**2,00,000/-**ಗಳ ಹಣ ಕೊಟ್ಟಿದ್ದಾರೆಂದು ಬರೆಸಲಾಗಿದೆ ಎಂದರೆ ಸರಿ. ಸದರಿ ಕರಾರುಪತ್ರದಲ್ಲಿ ತಹಶೀಲ್ದಾರ್ ನ್ಯಾಯಾಲಯ, ಉಪವಿಭಾಗಾಧಿಕಾರಿಗಳ ನ್ಯಾಯಾಲಯ ಮತ್ತು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿನ ಪ್ರಕರಣಗಳನ್ನು ಬರೆಸಿದ್ದಾರೆ ಎಂದರೆ ಸರಿ. ಸದರಿ ಪತ್ರದಲ್ಲಿ ಉಳಿದ ಹಣವನ್ನು ದಿಃ **31.06.2009** ರೊಳಗೆ ನೋಂದಣಿ ಮಾಡಿಸಿಕೊಳ್ಳಬೇಕೆಂದು ಬರೆಸಿದ್ದಾರೆ ಎಂದರೆ ಸರಿ. **2008** ರಲ್ಲಿ ಬರೆದ ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಪತ್ರ ನಿಜ ಎನ್ನುತ್ತಾರೆ. ನಾನು, ವಿಜಯಕುಮಾರ್, ದೊಡ್ಡಯ್ಯಮೂರ್ತಿ ಮತ್ತು ನಾಗರಾಜ್‌ರವರು ಶಾಮೀಲಾಗಿ ಪ್ರತಿವಾದಿಯರು ನೀಡಿದ್ದ ಜಿಪಿಎ ಅನ್ನು ದುರುಪಯೋಗಪಡಿಸಿಕೊಂಡು ಕರಾರು ಪತ್ರವನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ದಿಃ **18.08.2009** ರಂದು ಕರಾರುಪತ್ರ ಆಗಿದೆ. ಪ್ರತಿವಾದಿಯರು ನನ್ನ ಹತ್ತಿರ ಯಾವ ದಿನಾಂಕದಂದು ಬಂದಿದ್ದರು ನೆನಪಿಲ್ಲ. ದಿಃ **18.08.2009** ರಂದು ನಮ್ಮ ಮನೆಯಲ್ಲಿ ಬೆಳಿಗ್ಗೆ **10** ರಿಂದ **10.30** ರ ಸಮಯದಲ್ಲಿ ಮಾರಾಟದ ಕುರಿತು ಮಾತುಕತೆಯಾಯಿತು. ವಾದಿ ಮತ್ತು ವಾದಿಯ ಕಡೆ ಫಯಾಜ್ ರವರು, ವಜೀರ್ ಸಾಹೇಬ್ ರವರು ಬಂದಿದ್ದರು. ಪ್ರತಿವಾದಿಯರು ಬಂದಿದ್ದರು. ಮೊದಲು ಪ್ರತಿವಾದಿಯರು ನಮ್ಮ ಮನೆಗೆ ಬಂದಿದ್ದರು. ಅಲ್ಲಿ ಅರ್ಧಗಂಟೆ ಮಾತುಕತೆಯಾಯಿತು. ಅಲ್ಲಿ ಮುಂಗಡ ಹಣವಾಗಿ ರೂ.**1000/-**ಗಳನ್ನು ವಾದಿ ವಜೀರ್ ಸಾಹೇಬ್ ರವರ ಹತ್ತಿರ ನೀಡಿದರು. ಉಳಿದ ಹಣವನ್ನು ತಾಲ್ಲೂಕು ಕಚೇರಿಯ ಎದುರುಗಡೆಯಿರುವ ಉದ್ಯಾನವನದಲ್ಲಿ ನೀಡಿದರು. ವಾದಿ ವಜೀರ್ ಸಾಬ್ ರವರ ಹತ್ತಿರ ನೀಡಿದ್ದರು. ಅವರು

ಪ್ರತಿವಾದಿಯರಿಗೆ ನೀಡಿದರು. ಹಣವನ್ನು ನೀಡಿದಾಗ ನಾನು, ನಾಗರಾಜ್, ಫಯಾಜ್ ಮತ್ತು ವಜೀರ್ ಸಾಬ್ ರವರು ಇದ್ದೆವು. ಪತ್ರವನ್ನು ನಾಗರಾಜ್ ತೆಗೆದುಕೊಂಡು ಬಂದರು. ಪತ್ರದಲ್ಲಿ ಗಣಕೀಕೃತ ಬೆರಳಚ್ಚು ಮಾಡಲಾಯಿತು. ಪತ್ರ ವ್ಯವಹಾರ 12 ರಿಂದ 2 ಗಂಟೆಯ ಒಳಗೆ ಆಯಿತು.

ಪತ್ರಕ್ಕೆ ಸಹಿಯನ್ನು ಮಹೇಂದ್ರ ವಕೀಲರ ಕಚೇರಿಯಲ್ಲಿ ಹಾಕಿಸಲಾಯಿತು. ನಾನು ಸಹ ಅಲ್ಲೆ ಸಹಿ ಮಾಡಿದೆ. ಸದರಿ ಸಹಿಯನ್ನು ಮಾಡಿದಾಗ ಅಂದಾಜು 2 ಗಂಟೆಯಾಗಿತ್ತು. ಸದರಿ ಪತ್ರಕ್ಕೆ ಮೊದಲು ಯಾರು ಮತ್ತು ನಂತರ ಯಾರು ಸಹಿ ಮಾಡಿದರು ಎಂದು ಹೇಳಲು ಆಗುವುದಿಲ್ಲ. ಪ್ರತಿವಾದಿಯರಲ್ಲಿ ಮೊದಲು ಯಾರು ನಂತರ ಯಾರು ಸಹಿ ಮಾಡಿದ್ದಾರೆಂದು ನೆನಪಿಲ್ಲ. ಸದರಿ ಕರಾರುಪತ್ರಕ್ಕೆ ಪ್ರತಿವಾದಿಯರು ಎಷ್ಟು ಬಾರಿ ಸಹಿ ಮಾಡಿದ್ದಾರೆ ಗೊತ್ತಿಲ್ಲ. ವಾದಿ ಒಂದೇ ಬಾರಿ ಸಹಿ ಮಾಡಿರುವುದನ್ನು ನೋಡಿದ್ದೇನೆ. ಪ್ರತಿವಾದಿಯರ ಆಸ್ತಿಯನ್ನು ಕಬಳಿಸಲು ನಾನು ಮತ್ತು ವಾದಿ ಸುಳ್ಳು ಕರಾರನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರಾಗಲೀ ಅವರ ಕುಟುಂಬದವರಾಗಲೀ ನಮ್ಮ ಹತ್ತಿರ ಕ್ರಯಕ್ಕಾಗಿ ಬಂದಿಲ್ಲ ಮತ್ತು ಕ್ರಯ ಮಾಡಿಲ್ಲ ಮತ್ತು ಮುಂಗಡ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. 2 ಲಕ್ಷ ರೂಪಾಯಿಗಳು ಒಂದು ಸಾವಿರ ಮುಖಬೆಲೆಯ ನೋಟುಗಳಾಗಿದ್ದವು. ಮುಖ್ಯವಿಚಾರಣೆಯಲ್ಲಿ ಹೇಳಿರುವ ಅಂಶಗಳು ಸುಳ್ಳು ಎಂದರೆ ಸರಿಯಿಲ್ಲ.

**<u>ಮರುವಿಚಾರಣೆಃ ಇಲ್ಲ.</u>**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.

ಓ.ಕೇ.ಸ.ಇ.ಎ.ಒ.

ಪ್ರಧಾನ ವ್ಯವಹಾರ ನ್ಯಾಯಾಧೀಶರು,
ಶಿಕಾರಿಪುರ.